

# "ನಮ್ಮಿಷ್ಟಗಳನರಿತು ನೀಡುವುದವನಿಗರಿದೇಂ?"

▸▸ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಕವಿ ಡಿ.ವಿ.ಜಿ.ಯವರು ಸಜ್ಜನಿಕೆಯಿಂದ ಬಾಳಿ ಬದುಕಿದವರು ಭಗವಂತನ ಇರುವಿಕೆಯ ಬಗ್ಗೆ ಬಹುದೊಡ್ಡ ಅಭಿಮಾನದ ಮಾತುಗಳನ್ನು ಪದ್ಯರೂಪದಲ್ಲಿ ನೀಡಿದ್ದಾರೆ. ಭಗವಂತನು ಸೃಷ್ಟಿಯದ್ಭುತ ಶಕ್ತಿಯುಳ್ಳವನಾಗಿದ್ದು, ನಮ್ಮಿಷ್ಟಗಳನ್ನು ನಿಷ್ಕಪಟವಾಗಿ ಸಲ್ಲಿಸಿದರೆ ಅವುಗಳನ್ನು ಈಡೇರಿಸುವುದು ಭಗವಂತನಿಗೆ ಕಷ್ಟವಲ್ಲವೆಂದು, ಆದರೆ ಅಂತಹ ಶುದ್ಧ ರೀತಿಯನ್ನು ಭಗವಂತನ ಮುಂದಿಡುವ ಬಗೆಯೇ ನಮಗಿರುವ ಕಷ್ಟವೆಂದಿದ್ದಾರೆ.

**"ಸೃಷ್ಟಿಯದ್ಭುತ ಶಕ್ತಿಯುಳ್ಳೋರ್ವನಿರಲು ನ**
**ಮ್ಮಿಷ್ಟಗಳನರಿತು ನೀಡುವುದವನಿಗರಿದೇಂ?**
**ಇಷ್ಟವಾತನೊಳುದಿಸುವಂತೆ ಚೋದಿಪುದೆಂತು**
**ಕಷ್ಟ ನಮಗಿಹುದಷ್ಟೇ ॥ಮಂಕುತಿಮ್ಮ॥**

ಅದ್ಭುತಶಕ್ತಿಯುಳ್ಳಸರ್ವವ್ಯಾಪಕಶಕ್ತಿಯು ನಮ್ಮ ಆಶೋತ್ತರಗಳನ್ನು ಈಡೇರಿಸಲು ಶಕ್ತಿಯನ್ನು ಹೊಂದಿದ್ದು, ಸರ್ವಾಂತರ್ಯಾಮಿಯಾಗಿ ನಮ್ಮ ನೆರವಿಗೆ ಬರುವವನಾಗಿದ್ದು, ಸರ್ವಜ್ಞನಾಗಿದ್ದು, ಸರ್ವರ ಅಭಿಪ್ರಾಯಗಳನ್ನು ಈಡೇರಿಸುವವನಾಗಿರುವಾಗ ನಾವೇಕೆ ಅನ್ಯಾಯದ ಮಾರ್ಗಗಳನ್ನು ಅನುಸರಿಸಬೇಕು. ಬದಲಾಗಿ ನಮ್ಮ ಪರಿಶ್ರಮದ ದುಡಿಮೆಗಳಿಂದ ಪರಮಾತ್ಮನನ್ನು ಮೆಚ್ಚಿಸಿ ಬೇಕೇಬೇಕಾದ ನೈಜ ಬೇಡಿಕೆಯನ್ನು ಮನದಾಳದಿಂದ ಬೇಡಿದೊಡೆ ತಪ್ಪದೇ ಒದಗಿಸುತ್ತಾನೆಂದು ದೃಢನಂಬಿಕೆಯನ್ನು ತಳೆಯಿರೆಂಬುದೇ ಈ ಪದ್ಯದ ಸಾರಾಂಶ.

ಹೀಗೆ ಭಗವಂತನಿಂದ ಪಡೆದ ಸರ್ವಸ್ವವನ್ನು ತನ್ನ ಸಹೋದರರೆನಿಸಿಕೊಂಡವರಿಗೆ ಹಾಗೂ ತುಳಿತಕ್ಕೊಳಗಾಗಿರುವ ಕೆಳವರ್ಗದವರಿಗೆ ಸಹಾಯ ಮಾಡುವ ಕ್ಷೇತ್ರವಾದ ಸಹಕಾರ ಕ್ಷೇತ್ರದಲ್ಲಿ ಜನಸೇವೆಗೆ ಹೆಚ್ಚಿನ ಅವಕಾಶವಿರುವುದರಿಂದ ಅದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳಿರೆಂಬುದೇ ಈ ಪದ್ಯದ ರಹಸ್ಯ ಸೂಚನೆಯಾಗಿದೆ.

ಕಾರ್ಯಶೈಲಿ, ವಿಶೇಷತೆ ಇತ್ಯಾದಿಗಳ ಮಾಹಿತಿ, ಅರ್ಜಿ ಸಲ್ಲಿಸಿಸುವ ಮುನ್ನವೇ ಸಿಗುತ್ತದೆ. ಇದರಿಂದಾಗಿ ಹೆಚ್ಚು ಅರ್ಹ ಅಭ್ಯರ್ಥಿಗಳು ಅರ್ಜಿ ಹಾಕಿ ಸಂಸ್ಥೆ ಸೇರುವುದು ಸಾಧ್ಯವಾಗುತ್ತದೆ.

### ಸೋಷಿಯಲ್ ಮೀಡಿಯಾದ ಸಮರ್ಥ ಬಳಕೆಗೆ ಬ್ಯಾಂಕುಗಳು ಏನು ಕ್ರಮ ಕೈಗೊಳ್ಳಬಹುದು?

- ಸೋಷಿಯಲ್ ಮೀಡಿಯಾದಲ್ಲಿ ಪ್ರಾರಂಭಿಕ ಹಂತದ ಪ್ರವೇಶ ಹಾಗೂ ಪ್ರಯೋಗಕ್ಕಾಗಿ ಸಿದ್ಧಗೊಳ್ಳಬೇಕು.
- ಅದಕ್ಕೆ ಬೇಕಾದ ಅಗತ್ಯ ಸಂಪನ್ಮೂಲಗಳನ್ನು ಜೋಡಿಸಬೇಕು.
- ಸೂಕ್ತ ವ್ಯಕ್ತಿಗಳಿಗೆ ಆ ಕಾರ್ಯದ ಅಧಿಕಾರ ಹಾಗೂ ಜವಾಬ್ದಾರಿಯನ್ನು ನೀಡಬೇಕು.
- ಬ್ಯಾಂಕಿನ ಅಧಿಕೃತ ಸೋಷಿಯಲ್ ಮೀಡಿಯಾ ಖಾತೆಗಳನ್ನು ತೆರೆಯಬೇಕು.
- ಅವುಗಳು ಹೆಚ್ಚೆಚ್ಚು ಜನರನ್ನು ತಲುಪುವಂತೆ 'ಪೇಡ್ ಅಡ್ವರ್ಟೈಸ್' ಸೇರಿದಂತೆ ಎಲ್ಲ ಪ್ರಯತ್ನ ಮಾಡಬೇಕು.
- ಖಾತೆಗಳು ಕೇವಲ ಲೈಕ್, ಶೇರ್‌ಗೆ ಸೀಮಿತವಾಗದೇ ಸಂವಾದಕ್ಕೆ ಹೆಚ್ಚು ಆದ್ಯತೆ ನೀಡಬೇಕು.
- ಆಗಾಗ ಇದರ ಪರಿಣಾಮಗಳ ಮೌಲ್ಯಾಂಕನ ನಡೆಯಬೇಕು.
- ಕಾಲಕ್ರಮೇಣ ಇದಕ್ಕೆ ಬೇಕಾದ ಆಂತರಿಕ ನೀತಿ ನಿಯಮಾವಳಿಗಳ ರಚನೆ ಮಾಡಬೇಕು.
- ಸೋಷಿಯಲ್ ಮೀಡಿಯಾದಲ್ಲಿ ಪ್ರಕಟಿಸಲು ಸೂಕ್ತವಾದ 'ಕಂಟೆಂಟ್', 'ಕ್ಯಾಚಿ ಡಿಸೈನ್'ನಲ್ಲಿ ತಯಾರಾಗಬೇಕು.
- ಪ್ರಕಟಗೊಳ್ಳುವ ವಿಷಯಗಳ ಬಗ್ಗೆ ಸಂಸ್ಥೆಯಲ್ಲಿ ಮೇಲಮಟ್ಟದಲ್ಲಿನ ಅಧಿಕಾರಿಯೊಬ್ಬರ ಉಸ್ತುವಾರಿ ಇರಬೇಕು.
- ನಮ್ಮ ಸಿಬ್ಬಂದಿಗಳು ಹೆಚ್ಚೆಚ್ಚು ನಮ್ಮ 'ಕಂಟೆಂಟ್' ಶೇರ್ ಮಾಡುವಂತೆ ಹಾಗೂ ಅವರು ಸಕ್ರಿಯವಾಗಿ ಸೋಷಿಯಲ್ ಮೀಡಿಯಾ ಕ್ಯಾಂಪೇನ್‌ಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು.

ಕೊನೆಯದಾಗಿ... ನಮಗೆ ಬೇಕು ಅಥವಾ ಬೇಡವಾರಲಿ.. ಮುಂದಿನ ದಿನಗಳಲ್ಲಿ "ಬಿಗ್ ಡೇಟಾ", "ಡೇಟಾ ಅನಲಿಟಿಕ್ಸ್" ಹಾಗೂ "ಆರ್ಟಿಫಿಶಿಯಲ್ ಇಂಟೆಲಿಜೆನ್ಸ್" ನಮ್ಮೆಲ್ಲರ ಜೀವನವನ್ನು ರೂಪಿಸಲಿವೆ ಹಾಗೂ ಅಗೋಚರವಾಗಿ ನಿಯಂತ್ರಿಸಲಿವೆ ಎಂದರೂ ತಪ್ಪಾಗಲಿಕ್ಕಿಲ್ಲ. ಅದಕ್ಕೆ ಈಗಲೇ ಸೂಕ್ತವಾದ ಪ್ರಾಥಮಿಕ ಸಿದ್ಧತೆಗಳನ್ನು ಪಟ್ಟಣ ಸಹಕಾರಿ ಬ್ಯಾಂಕುಗಳು ಸೇರಿದಂತೆ ಸಹಕಾರಿ ಸಂಸ್ಥೆಗಳು ಮಾಡಿಕೊಂಡಲ್ಲಿ ಆಧುನಿಕ ಯುಗದಲ್ಲೂ ಕೂಡ ಸಹಕಾರ ತತ್ವ, ಮಾನವೀಯ ಸ್ಪರ್ಶ ಹಾಗೂ ತಾಂತ್ರಿಕ ಉನ್ನತಿ ಹೊಂದಿ ಸಹಕಾರಿಗಳು ಕೂಡ ಯಶಸ್ವಿಯಾಗಲು ಸಾಧ್ಯ.